**ಅಸಲು ದಾವಾ ನಂಃ 32/2017**
**ಡಿ.ಡಬ್ಲ್ಯೂಃ 2,**

**ದಿನಾಂಕ :24-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್. ವಾದಿ ಪರ ವಕೀಲರಿಂದ :**

ನನ್ನ ಜನ್ಮ ದಿನಾಂಕ: 10-08-1968 ಇರುತ್ತದೆ. ನನ್ನ ತಂದೆ ದಿ: 27-11-1993 ರಂದು ತೀರಿ ಹೋಗಿದ್ದಾರೆ. ನಮ್ಮ ಅಜ್ಜ ಶರಣಪ್ಪನನ್ನು ನೋಡಿಲ್ಲಾ, ಯಾವಾಗ ತೀರಿಕೊಂಡಿದ್ದಾರೆಂದು ಗೊತ್ತಿಲ್ಲಾ. ನಮ್ಮ ಅಜ್ಜ ನಮ್ಮ ತಂದೆ ಚಿಕ್ಕವರಿದ್ದಾಗ ತೀರಿ ಹೋಗಿದ್ದಾರೆ. ನಮ್ಮ ಅಜ್ಜ ಶರಣಪ್ಪನಿಗೆ ಇಬ್ಬರು ಗಂಡು ಮಕ್ಕಳು ಅವರ ಹೆಸರು ದೇವಿಂದ್ರಪ್ಪ ಮತ್ತು ಶಿವಯೋಗೆಪ್ಪ, ಹೆಣ್ಣು ಮಕ್ಕಳು ಸುಮಿತ್ರಾ, ಭಾಗಮ್ಮ ಮತ್ತು ಇನ್ನೊಬ್ಬ ಹೆಣ್ಣು ಮಗಳು ಕಾಳಮ್ಮ ಚಿಕ್ಕವಳಿದ್ದಾಗ ತೀರಿ ಹೋಗಿದ್ದಾಳೆ. ಭಾಗಮ್ಮ ತೀರಿ ಹೋಗಿದ್ದು ಅವಳಿಗೆ ರಾಚಮ್ಮ ಮತ್ತು ಕಾಳಮ್ಮ ಹೆಣ್ಣು ಮಕ್ಕಳು ಎಂದರೆ ಸರಿ. ಭಾಗಮ್ಮ ಮಗಳಾದ ಕಾಳಮ್ಮ ನ್ನು ಮೃತ ವಾದಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ನಮ್ಮ ತಂದೆಗೆ 5 ಜನ ಹೆಣ್ಣು ಮಕ್ಕಳು, 2 ಜನ ಗಂಡು ಮಕ್ಕಳು. ಅವರ ಹೆಸರು ಅಯಮ್ಮ್, ನೀಲಮ್ಮ, ಮೋನಮ್ಮ, ಜಗದೇವಿ ಮತ್ತು ಲಕ್ಷೀ, ಗಂಡ ಮಕ್ಕಳು ನಾನು ಮತ್ತು 7ನೇ ಪ್ರತಿವಾದಿ. ನಾನು ಕೆಎಸ್ಆರ್ ಟಿಸಿ ನೌಕರಿಗೆ 1998 ರಲ್ಲಿ ಸೇರಿದೇನು. ನಾನು ಸೇವೆ ಸೇರಿದಾಗ ನನ್ನ ಸಂಬಳ ತಿಂಗಳಿಗೆ ರೂ. 3,000/- ಇತ್ತು. ನಾನು ನೌಕರಿಗೆ ಸೇರಿದಾಗ ಇಬ್ಬರ ಸಹೋದರಿಯ ಮದುವೆ ಆಗಿತ್ತು, ಇನ್ನು ಮೂರು ಜನರ ಮದುವೆ ಆಗಿರಲಿಲ್ಲಾ. ಮೃತ ವಾದಿ ಎಷ್ಟು ಶಾಲೆ ಕಲಿತ್ತಿದ್ದಾರೆ ಗೊತ್ತಿಲ್ಲಾ. ನನ್ನ ತಂದೆಗೆ ಹೆಸರು ಮಾತ್ರ ಬರೆಯಲು ಬರುತ್ತದೆ ಆದರೆ ಶಾಲೆ ಕಲಿತಿಲ್ಲಾ.

ನಮ್ಮ ಹಿರಿಯರಿಂದ ಸ.ನ. 24/2 ಜಮೀನು ಮತ್ತು ಮನೆ ನಂಬರ : 1-14 ಮಾತ್ರ ಬಂದಿದೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಪ್ಯಾರಾ ನಂ. 4 ರಲ್ಲಿ 1990 ರಲ್ಲಿ ದಾವಾ ಜಮೀನು ನನ್ನ ತಂದೆ ಮತ್ತು ಮೃತ ವಾದಿ ಮಧ್ಯ ಪಾಲು ಆಗಿದೆ ಅಂತಾ ಯಾವುದಾದರೂ ದಾಖಲೆ ಸಲ್ಲಿಸಿದ್ದೀರಾ ಎಂಬ ಪ್ರಶ್ನೆಗೆ

ಸಾಕ್ಷಿ ನಮ್ಮ ತಾಯಿ ಬಳಿ ಇದೆ ಎಂದು ನುಡಿಯುತ್ತಾರೆ. ನಮ್ಮ ತಾಯಿ ಬಳಿ ಇದ್ದ ದಾಖಲೆಯನ್ನು ಸಹ ನೋಡಿಲ್ಲಾ. ಸದರಿ ಪಾಲು ವಿಭಾಗದಲ್ಲಿ ದಾವಾ ಜಮೀನಿನ ಉತ್ತರಕ್ಕೆ ವಾದಿ ಭಾಗಕ್ಕೆ ಬಂದಿದ್ದು ಮತ್ತು ದಕ್ಷಿಣ ಭಾಗ ನನ್ನತಂದೆ ಬಂದಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದೇವನತೆಗನೂರು ಗ್ರಾಮದಲ್ಲಿರುವ ದಾವಾ ಮನೆ ಪೂರ್ತಿ ಬಿದಿದ್ದು ವಾಸಕ್ಕೆ ಯೋಗ್ಯ ಇಲ್ಲಾ. ವಾದಿ ಮತ್ತು ಪ್ರತಿವಾದಿಯರು ಎಲ್ಲರೂ ಗುಲಬರ್ಗಾದಲ್ಲಿದ್ದು ನಾನೊಬ್ಬನೇ ಕಾಳನೂರುದಲ್ಲಿ ವಾಸ ಇದ್ದೇನೆ. ದಾವಾ ಮನೆಯಲ್ಲಿಯೂ ಸಹ ಪಾಲು ಆಗಿದ್ದು ಇಬ್ಬರಿಗೂ ಅರ್ಧ ಅರ್ಧ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಶರಣಪ್ಪನ 4 ಮಕ್ಕಳ ಮಧ್ಯ ಯಾವುದೇ ಪಾಲು ವಿಭಾಗ ಆಗಿಲ್ಲಾ ಎಂದರೆ ಸರಿಯಲ್ಲ . ಮೃತ ವಾದಿ ತನ್ನಮಗಳ ಮದುವೆಗಾಗಿ ರೂ. 50,000/- ಸಾಲ ಪಡೆದಿರುವ ದಾಖಲೆ ನನ್ನ ತಾಯಿ ಬಳಿ ಇದೆ ಎಂದು ನುಡಿಯುತ್ತಾರೆ. ಶಿವಯೋಗೆಪ್ಪ ನನ್ನ ಬಳಿ ಸಾಲ ರೂ. 50,000/- ತೆಗೆದುಕೊಂಡಿದ್ದ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಮೃತ ವಾದಿ ಆತನಿಗೆ ಹಣ ಅಡಚಣೆ ಇದ್ದು ನನ್ನ ಬಳಿ ರೂ.1,01,000/- ಹಣ ಪಡೆದ ಕಾರಣ ಆತ ನನಗೆ ಅರ್ಧ ಜಮೀನನ್ನು ಮಾರಾಟ ಮಾಡಲು ಒಪ್ಪಿದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದಿ:22-05-2001 ರಲ್ಲಿ ಮೃತ ವಾದಿ ನನಗೆ ಅರ್ಧ ಹಿಸ್ಸೆ ಜಮೀನನ್ನು ಮತ್ತು ಮನೆಯನ್ನು ಮಾರಾಟ ಮಾಡುತ್ತಾನೆ ಎಂದು ನಿಡಿ-3 ರ ಪ್ರಕಾರ ಕರಾರು ಪತ್ರ ಬರೆದುಕೊಟ್ಟಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಉಳಿದ ಪ್ರತಿವಾದಿಯರ ಮೇಲೆ . ಓಎಸ್.ನಂ: 21/2009 ನ್ನು ಈ ದಾವಾ ಆಸ್ತಿ ಮತ್ತು ಉಳಿದ 4 ಆಸ್ತಿಯನ್ನು ಸೇರಿಸಿ ದಾವೆ ಸಲ್ಲಿಸಿದ್ದು, ಸದರಿ ದಾವೆ ವಜಾ ಆಯಿತು ಎಂದರೆ ಸರಿಯಲ್ಲ. ನಾನು ಆರ್.ಎ. 6/2014 ಮೇಲ್ಮನವಿ ಸಲ್ಲಿಸಿದ್ದು ಅದು ಸಹ ವಜಾ ಆಯಿತು ಎಂದರೆ ಸರಿಯಲ್ಲ .

ಓಎಸ್. 21/2009 ರಲ್ಲಿ ಆ ವೇಳೆಯಲ್ಲಿ ಈ ವಾದಿಯು ಜೀವಂತ ಇದ್ದರೂ ಸಹ ಆತನನ್ನು ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ಸಾಕ್ಷಿ ಆ ದಾವೆಯನ್ನು ನಾನು ಸಲ್ಲಿಸಿಲ್ಲಾ ನಮ್ಮ ತಂದೆ ತಾಯಿ ನನ್ನ ಮೇಲೆ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಮೃತ ವಾದಿ ಸುಮಿತ್ರಾ ಮತ್ತು ಮೊನಪ್ಪ ಇವರ ಸಮಕ್ಷಮ ಖರಿದಿ ಕರಾರು ಪತ್ರ ಬರೆದುಕೊಟ್ಟಿದ್ದಾನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಮೃತ ವಾದಿ ಆತನ ಅರ್ಧ ಹಿಸ್ಸೆಯನ್ನು ನನಗೆ ಖರಿದಿ ಕರಾರು ಪತ್ರ ಬರೆದುಕೊಟ್ಟ ಕಾರಣ ನಾನೇ ಮಾಲಿಕ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಮೃತ ವಾದಿ ನನಗೆ ಯಾವುದೇ ರೀತಿಯ ಖರಿದಿ ಕರಾರು ಪತ್ರ ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲ . ದಾವಾ ಆಸ್ತಿ ಇನ್ನು ಜಂಟಿಯಲ್ಲಿದ್ದು ಇನ್ನುವರೆಗೆ ಪಾಲು ಆಗಿಲ್ಲಾ ಎಂದರೆ ಸರಿಯಲ್ಲ . ಮೃತವಾದಿಯ ಹೆಂಡತಿ ಮಕ್ಕಳಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಿಡಿ-3 ಮತ್ತು 4 ನ್ನು ಮೊದಲಿನ ದಾವೆಗೆ ಉಪಯೋಗವಾಗಲಿ ಎಂದು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-3 ಮತ್ತು 4 ಈ ತರಹ ದಾಖಲೆಯನ್ನು ಮೃತ ವಾದಿ ಎಂದಿಗೂ ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲ . ದಾವಾ ಆಸ್ತಿ ಇನ್ನು ಜಂಟಿ ಕಬ್ಜೆಯಲ್ಲಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ :ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.**